ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜೂನ್ 15, 2020

# ಪತ್ರಿಕಾ ಪ್ರಕಟಣೆ

## ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಚಾಲನೆ :

### ಪ್ರವಾಸೋದ್ಯಮ–ಕೈಗಾರಿಕೆ ಅಭಿವೃದ್ಧಿಗೆ ಉತ್ತೇಜನ –ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

**ಬೆಂಗಳೂರು, ಜೂನ್ 15 (ಕರ್ನಾಟಕ ವಾರ್ತೆ)**

ಜಿಲ್ಲೆಯ ಜನತೆಯ ಬಹುದಿನಗಳ ಕನಸಾಗಿದ್ದ ಶಿವಮೊಗ್ಗ ವಿಮಾನ ನಿಲ್ದಾಣ ನಿರ್ಮಾಣದಿಂದಾಗಿ ಜಿಲ್ಲೆಯ ಹಾಗೂ ಸುತ್ತಲಿನ ಜಿಲ್ಲೆಗಳ ಪ್ರವಾಸೋದ್ಯಮ ಹಾಗೂ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಉತ್ತೇಜನ ದೊರೆಯಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.

ಅವರು ಇಂದು ಬೆಂಗಳೂರಿನ ಗೃಹ ಕಚೇರಿ ಕೃಷ್ಣಾದಿಂದ ಆನ್‌ಲೈನ್ ಮೂಲಕ ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡುತ್ತಾ, ಶಿವಮೊಗ್ಗ ತಾಲೂಕಿನ ಸೋಗಾನೆ ಗ್ರಾಮದಲ್ಲಿ 220ಕೋಟಿ ರೂ. ವೆಚ್ಚದಲ್ಲಿ 662.38 ಎಕ್ರೆ ಪ್ರದೇಶದಲ್ಲಿ ಸುಸಜ್ಜಿತ ವಿಮಾನ ನಿಲ್ದಾಣ ನಿರ್ಮಿಸಲಾಗುತ್ತಿದೆ. ಕಾಮಗಾರಿಯನ್ನು ಎರಡು ಹಂತಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಒಂದು ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಗುಣಮಟ್ಟದಲ್ಲಿ ಯಾವುದೇ ರಾಜಿಯಿಲ್ಲದೆ ನಿಗದಿತ ಸಮಯದ ಒಳಗಾಗಿ ವಿಮಾನ ನಿಲ್ದಾಣ ಕಾಮಗಾರಿ ಪೂರ್ಣಗೊಳಿಸಬೇಕು. ಉಡಾನ್ ಯೋಜನೆಯಿಂದಾಗಿ ಜನಸಾಮಾನ್ಯರೂ ವಿಮಾನಯಾನ ಕೈಗೊಳ್ಳಬಹುದಾದ ವಾತಾವರಣವಿದೆ ಎಂದು ಹೇಳಿದರು.

ಈ ಕಿರು ವಿಮಾನ ನಿಲ್ದಾಣವು ಶಿವಮೊಗ್ಗ ಹಾಗೂ ಸುತ್ತ ಮುತ್ತಲಿನ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಹಾಗೂ ಕೈಗಾರಿಕೋದ್ಯಮ ಮತ್ತು ಇತರ ಆರ್ಥಿಕ ಚಟುವಟಿಕೆಗಳು ಇನ್ನಷ್ಟು ಗರಿಗೆದರಲು ನೆರವಾಗಲಿದೆ ಎಂಬ ವಿಶ್ವಾಸ ನನ್ನದು. ರಾಜ್ಯದ ಸರ್ವತೋಮುಖ ಅಭಿವೃದ್ಧಿಯೆ ನಮ್ಮ ಸರ್ಕಾರದ ಗುರಿ. ಈ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲೂ ಆರೋಗ್ಯ, ಶಿಕ್ಷಣ, ಕೃಷಿ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಎಲ್ಲಾ ಕ್ರಮಗಳನ್ನು ಸರ್ಕಾರ ಈಗಾಗಲೇ ಕೈಗೊಂಡಿದೆ ಎಂದು ಅವರು ತಿಳಿಸಿದರು.

ಅಂತೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ನೀರಾವರಿ ಯೋಜನೆಗಳು, ಶಾಲೆಯಲ್ಲಿ ಮುಲಭೂತ ಸೌಲಭ್ಯ ಕುಡಿಯುವ ನೀರು, ರಸ್ತೆ ಮುಂತಾದ ಕಾರ್ಯಕ್ರಮಗಳು ಈಗಾಗಲೇ ಪ್ರಗತಿಯಲ್ಲಿದೆ. ಶಿವಮೊಗ್ಗ ಸ್ಮಾರ್ಟ್‌ಸಿಟಿ ಯೋಜನೆಗೆ ವೇಗ ದೊರೆತಿದ್ದು, ಹಲವಾರು ಕಾಮಗಾರಿಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಶಿವಮೊಗ್ಗ ಜಿಲ್ಲೆಯಲ್ಲಿ ರಸ್ತೆ ಸಂಪರ್ಕ ಸುಧಾರಣೆಗೆ ಹೆಚ್ಚು ಒತ್ತು ನೀಡಲಾಗಿದೆ. ಚತುಷ್ಪಥ ಹೆದ್ದಾರಿ ಕಾಮಗಾರಿಗೆ ಚಾಲನೆ ನೀಡಲಾಗಿದ್ದು ಪ್ರಗತಿಯಲ್ಲಿದೆ. ಕೇಂದ್ರ ಸರ್ಕಾರದ ನೆರವಿನೊಂದಿಗೆ ಜಿಲ್ಲೆಯಲ್ಲಿ ಹಲವಾರು ರೈಲ್ವೆ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಶಿವಮೊಗ್ಗ-ಶಿಕಾರಿಪುರ ರೈಲ್ವೇ ಮಾರ್ಗದ ಕಾಮಗಾರಿಗಳು ಸಹ ಪ್ರಗತಿಯಲ್ಲಿದೆ.

ಇಂದು ಉದ್ಘಾಟನೆಗೊಂಡಿರುವ ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ನೂತನ ವಿಭಾಗ ಕಚೇರಿ ಅಡಿಯಲ್ಲಿ ಸಾಗರ ತಾಲ್ಲೂಕು ಸಿಗಂಧೂರು ಬಳಿ ಶರಾವತಿ ಹಿನ್ನೀರಿಗೆ ಸೇತುವೆ ನಿರ್ಮಾಣ ಕಾಮಗಾರಿಯೂ ಸೇರುತ್ತದೆ. ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಪ್ರಮುಖ ಕಾಮಗಾರಿ ಇದಾಗಿದ್ದು, ಈ ಭಾಗದ ಜನರಿಗೆ ಶಾಶ್ವತ ಸಂಪರ್ಕ ಕಲ್ಪಿಸುವುದು ಸಾಧ್ಯವಾಗಲಿದೆ. ಜಿಲ್ಲೆಯ ಜನರ ಬಹು ದಿನಗಳ ಬೇಡಿಕೆಯಾಗಿದ್ದ ವಿಮಾನ ನಿಲ್ದಾಣ ಹಾಗೂ ಸಿಗಂಧೂರು ಸೇತುವೆಯನ್ನು ಈಡೇರಿಸುವ ಸದಾವಕಾಶ ಇದೀಗ ಒದಗಿ ಬಂದಿದೆ.

ರಾಷ್ಟ್ರೀಯ ಹೆದ್ದಾರಿ ನೂತನ ವಿಭಾಗ ಕಚೇರಿಯ ಸ್ಥಾಪನೆಯಿಂದ ಜಿಲ್ಲೆಯ ರಸ್ತೆ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರೆಯಲಿದೆ ಎಂದು ನಾನು ಭಾವಿಸಿದ್ದೇನೆ. ಈ ಎಲ್ಲಾ ಕಾಮಗಾರಿಗಳಿಗೆ ತ್ವರಿತವಾಗಿ ಚಾಲನೆ ನೀಡುವಲ್ಲಿ ಸಂಸದ ರಾಘವೇಂದ್ರರವರ ನಿರಂತರ ಪರಿಶ್ರಮವಿದೆ. ವಿಮಾನ ನಿಲ್ದಾಣ ಕಾಮಗಾರಿಯ ಗುಣಮಟ್ಟದಲ್ಲಿ ರಾಜಿಯಿಲ್ಲದೆ ಸಮಯಬದ್ಧವಾಗಿ ಪೂರ್ಣಗೊಳಿಸಬೇಕೆಂದು ನಾನು ಅಧಿಕಾರಿಗಳಿಗೆ ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಕೋವಿಡ್-19 ಕಾರಣದಿಂದಾಗಿ ರಾಜ್ಯದ ಹಾಗೂ ಅಭಿವೃದ್ಧಿ ಸಾಧಿಸಬೇಕಾಗಿರುವುದು ನಮ್ಮ ಮುಂದಿರುವ ಸವಾಲು. ಅನಿವಾರ್ಯ ಕಾರಣಗಳಿಗಾಗಿ ನಾನು ಖುದ್ದಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ತಾವೆಲ್ಲರೂ ಸಾಮಾಜಿಕ ಅಂತರ ಕಾಪಾಡಿಕೊಂಡು, ವಯಕ್ತಿಕ ಸ್ವಚ್ಛತೆಯೊಂದಿಗೆ ಈ ವೈರಾಣುವಿನ ನಿಯಂತ್ರಣಕ್ಕೆ ಸಹಕರಿಬೇಕು ಹಾಗೂ  ಅಭಿವೃದ್ಧಿಯೆಡೆಗೆ ಸಾಗುತ್ತಾ, ಸದೃಡ ರಾಜ್ಯ ಕಟ್ಟೋಣ.

ಕರ್ನಾಟಕವನ್ನು ಅಭಿವೃದ್ಧಿ ಪಥದತ್ತ ನಡೆಸಿ ಮಾದರಿ ರಾಜ್ಯವನ್ನಾಗಿಸಲು ನಮ್ಮ ಸರ್ಕಾರ ಶ್ರಮಿಸಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ. ಎಸ್. ಈಶ್ವರಪ್ಪ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಶಂಕರಗೌಡ ಪಾಟೀಲ, ಶಿವಮೊಗ್ಗ ಲೋಕಸಭಾ ಸದಸ್ಯ ಬಿ. ವೈ. ರಾಘವೇಂದ್ರ, ಶಿವಮೊಗ್ಗ, ಲೋಕೋಪಯೋಗಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಕಪಿಲ್ ಮೋಹನ್ ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

## ಸಚಿವರ ಪ್ರವಾಸ

**ಬೆಂಗಳೂರು, ಜೂನ್ 15 (ಕರ್ನಾಟಕ ವಾರ್ತೆ)**

**ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ. ಗೋಪಾಲಯ್ಯ ಅವರು ಜೂನ್ 17 ಮತ್ತು 18 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂದು ಜೂನ್ 18 ರಂದು ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಪುರುಷ ಬಂಜೆತನದ ಉಚಿತ ಚಿಕಿತ್ಸೆ

**ಬೆಂಗಳುರು ಜೂನ್ 15 (ಕರ್ನಾಟಕ ವಾರ್ತೆ )**

**“ಪುರುಷ ಬಂಜೆತನದ (ವಿಶೇಷವಾಗಿ ಕ್ಷೀಣ ಶುಕ್ರ – ಒಲಿಗೋಸ್ಪರ್ಮಿಯಾ) ರೋಗಿಗಳಿಗೆ ಇಂದಿನಿಂದ ಈ ತಿಂಗಳ 30ನೇ ತಾರೀಕಿನವರೆಗೂ ಉಚಿತ ಚಿಕಿತ್ಸೆ ನೀಡಲಾಗುತ್ತದೆ ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಪ್ರಕಟಣೆ ತಿಳಿಸಿದೆ.**

ನಗರದ ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ದ್ರವ್ಯಗುಣ ವಿಭಾಗದಿಂದ ಈ ಚಿಕಿತ್ಸೆ ನೀಡಲಾಗುತ್ತಿದ್ದು, ದಿನಾಂಕ: 15–06–2020 ರಿಂದ 30–06–2020 ರವರೆಗೆ ಆಸಕ್ತರು ಈ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ.

ಆಸ್ಪತ್ರೆಗೆ ಭೇಟಿ ನೀಡುವ ಮೊದಲು ರೋಗಿಗಳು ಪೂರ್ವಭಾವಿಯಾಗಿ ವೈದ್ಯರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಸಂದರ್ಶನದ ವೇಳೆಯನ್ನು ನಿಗಧಿ ಮಾಡಿಕೊಂಡು ತಮ್ಮಲ್ಲಿರುವ ಲ್ಯಾಬ್ ವರದಿಗಳನ್ನು ಮತ್ತು ಇತರೆ ಚಿಕಿತ್ಸಾ ವಿವರಗಳನ್ನು ವೈದ್ಯರನ್ನು ಭೇಟಿ ಮಾಡುವ ಮೊದಲು (ಡಾ॥ ನಾಗೇಂದ್ರಚಾರ್, ಎಂ. ಮೊಬೈಲ್ ಸಂ: 9731353737 ) ಈ ವಾಟ್ಸ್ ಆ್ಯಪ್ ಸಂಖ್ಯೆಗೆ ರವಾನಿಸಿ ವೈದ್ಯರನ್ನು ನಿಗಧಿತ ಸಮಯದಲ್ಲಿ ಭೇಟಿ ಮಾಡಲು ಮಹಾವಿದ್ಯಾಲಯದ ಪ್ರಾಚಾರ್ಯರು ತಿಳಿಸಿದ್ದಾರೆ.

## ಲೋಕಸೇವಾ ಆಯೋಗದ ಪರೀಕ್ಷೆ ವೇಳಾಪಟ್ಟಿ ಪ್ರಕಟ

ಬೆಂಗಳೂರು ಜೂನ್ 15 (ಕರ್ನಾಟಕ ವಾರ್ತೆ )

ಕರ್ನಾಟಕ ಲೋಕಸೇವಾ ಆಯೋಗವು ಕೋವಿಡ್ –19 ಸಂಬಂಧವಾಗಿ ಮುಂದೂಡಲಾಗಿದ್ದ ಕರ್ನಾಟಕ ರಾಜ್ಯ ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯಲ್ಲಿನ ಸಾಲಿನ ಗ್ರೂಪ್ ಎ ವೃಂದದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ 24 ಹುದ್ದೆಗಳ ಪರೀಕ್ಷೆಯನ್ನು 7–7–2020 ರಂದು ನಡೆಸಲಿದೆ. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಮೂಹ ಎ ವೃಂದದ ಸಹಯಕ ನಿಯಂತ್ರಕರು 54 ಹುದ್ದೆಗಳ ಪರೀಕ್ಷೆಯನ್ನು 19–07–2020 ರಂದು ನಡೆಸಲಿದೆ. ಗೆಜೆಟೆಡ್ ಪ್ರೊಬೆಷನರ್ಸ್ ಗ್ರೂಪ್ ಎ ಮತ್ತು ಬಿ ವೃಂದದ ಒಟ್ಟು 106 ಹುದ್ದೆಗಳ ಪರೀಕ್ಷೆಯನ್ನು 2–8–2020 ರಂದು ನಡೆಸಲಿದೆ . ಪರೀಕ್ಷಾ ವೇಳಾಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಪ್ರಕಟಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**A COVID-19 workplace readiness tool for organisations**

An online self-assessment tool known as the COVID-19 Workplace Readiness Indicator has been developed by a team of IISc researchers, in collaboration with the Karnataka State Disaster Management Authority (KSDMA). The tool was developed as part of research efforts at the new Centre for Networked Intelligence (CNI) established at IISc with generous support under Corporate Social Responsibility (CSR) from Cisco.

As cities and businesses ease out of the lockdowns imposed due to the ongoing COVID-19 pandemic, workplaces need to effectively follow guidelines in order to ensure safety. The Workplace Readiness Indicator is an advisory tool that can enable organisations to understand their current level of preparedness and key risk areas. It will also help them plan and establish pandemic-specific policies, procedures, and necessary management practices.

"The tool not only scores an organisation's readiness, but also provides some targeted suggestions if specific weaknesses are identified," says Nihesh Rathod, a Cisco-IISc PhD scholar at the Department of Electrical Communication Engineering, IISc, who helped develop the tool.

The Government of Karnataka has recommended this advisory tool to various organisations in the state, as they begin operation in accordance with the Unlock-1 guidelines.

"The end of the lockdown does not automatically mean a return to the old 'normal' and the opening will take different shapes, with different regions and different business sectors opening up in different ways and at differing speeds," says Manoj Rajan, Commissioner, KSDMA. "Organisations will need to take a holistic approach to restarting. Emerging from the lockdown, companies and workplaces will need to be more vigilant about health and increase their demands on safety."

The tool takes into account broad epidemic factors and social objectives, and suggests a simple readiness threshold that organisations need to meet or exceed in order to operate effectively, while managing their pandemic response. They can then decide for themselves their best mix (shifts, precautions taken, company advisories, etc.) to maximise their business objectives while adhering to this threshold.

The tool is simple and easy to use. An organisation can enter relevant information about their workplace and their current level of operation. Readiness is calculated using ten specific indices, each with a maximum score of 100. These include infrastructure, precautions, outreach, employee interactions, transport, details of eateries, hygiene and sanitation. The overall readiness index is the sum of the ten individual readiness indices. The tool scores the organisation's readiness across various categories and provides a consolidated report.

The tool also shows the organisation's percentile with respect to other similar organisations. "Once enough organisations use the tool, each organisation can see where it stands among other organisations of the same kind. Such a comparison may induce organisations to be proactive and take more positive steps towards mitigating the pandemic," says project lead Rajesh Sundaresan, Professor, Department of Electrical Communication Engineering, IISc.

The tool is an outcome of a broader effort to develop mechanisms that enable better and decentralised decision making, an important goal of the Centre for Networked Intelligence.

"Over the last few months, every aspect of our world has been disrupted, prompting us to pivot to a new way of life very quickly," says Krishna Sundaresan, Vice President, Engineering, Cisco India & SAARC. "In the beginning, technology served as the greatest enabler of business continuity, as workforces across India turned remote. Now, as they return to office, technology is once again playing a significant role in ensuring employees' safety, which is a top priority for any organization. In many ways, this pandemic has emphasized that people come first, and that we are better together. This crisis is much too complex for anyone to solve alone, and in partnership with IISc, we are committed to helping the industry emerge from it stronger."

The readiness tool has been put together in a very short time to help organisations navigate operational difficulties. The researchers are continuing to work on improving the tool and its usage.

**REFERENCE**

Web portal: https://covid.readiness.in

The software is open source and can be downloaded from github: https://github.com/cni-iisc/workplace-readiness

Full report: https://covid19.iisc.ac.in/wp-content/uploads/2020/06/Report-20200518-WorkplaceReadiness.pdf

**CONTACT**

Rajesh Sundaresan
Professor, Department of Electrical Communication Engineering
Indian Institute of Science (IISc)
rajeshs@iisc.ac.in

+91-80-2293 2658

**NOTE TO JOURNALISTS:**
a) If any of the text in this release is reproduced verbatim, please credit the IISc press release.
b) For any queries about IISc press releases, please write to news@iisc.ac.in or pro@iisc.ac.in.